## ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 24-01-2019 ರಂದು ಸಂಜೆ 04:00 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
6. ಡಾ|| ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
7. ಡಾ|| ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ.
9. ಶ್ರೀ ಚಂದ್ರಕಾಂತ್ ಭಜಂತ್ರಿ, ಅಧೀನ ಕಾರ್ಯದರ್ಶಿ.
10. ಶ್ರೀಮತಿ ಲತಾ .ಎಂ, ಕಛೇರಿ ಅಧೀಕ್ಷಕರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

ಆಯೋಗದ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಎಲ್ಲಾ ಮಾಹಿತಿ ಆಯುಕ್ತರುಗಳಿಗೆ ಸ್ವಾಗತವನ್ನು ಕೋರಿದರು.

**1. ದಿನಾಂಕ: 02-02-2019 ರಂದು ಮಾಹಿತಿ ಆಯೋಗದ ವತಿಯಿಂದ ಏರ್ಪಡಿಸಲಾಗಿರುವ ಕಾರ್ಯಾಗಾರದ ಪೂರ್ವಭಾವಿ ಸಿದ್ಧತೆ ಕುರಿತು.**

ಎಲ್ಲಾ ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳಿಗೆ ಹಾಗೂ ಕಾರ್ಯದರ್ಶಿಯವರಿಗೆ ದಿನಾಂಕ: 02-02-2019ರಂದು ನಡೆಯಲಿರುವ ಮಾಹಿತಿ ಆಯೋಗದ ಕಾರ್ಯಾಗಾರದ "Adjudication Process under the RTI Act" ಗೆ ಸಂಬಂಧಿಸಿದ ಆಹ್ವಾನ ಪತ್ರಿಕೆಗಳನ್ನು ನೀಡಿ, ಸಂಬಂಧಿಸಿದ ಕಾರ್ಯಾಗಾರದ ಸಿದ್ಧತೆಗಳ ಬಗ್ಗೆ ಚರ್ಚಿಸಲಾಯಿತು.

- ಪ್ರತಿ ಆಯುಕ್ತರುಗಳಿಗೆ 25 ಆಹ್ವಾನ ಪತ್ರಿಕೆಗಳನ್ನು ನೀಡಿ ವಿವಿಧ ಇಲಾಖೆಗಳ (ಬಿ.ಬಿ.ಎಂ.ಪಿ, ಬಿ.ಡಿ.ಎ, ಪೊಲೀಸ್ ಇಲಾಖೆ ಇತ್ಯಾದಿ) ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಕಾರ್ಯಾಗಾರಕ್ಕೆ ಆಹ್ವಾನಿಸುವಂತೆ ತಿಳಿಸಲಾಯಿತು.
- ಕಾರ್ಯಾಗಾರದ ಉದ್ಘಾಟನಾ ಸಮಾರಂಭವು ನೊಂದಣಿಯೊಂದಿಗೆ 10:15 ರಿಂದ 12:00 ಗಂಟೆಯವರೆಗೆ ನಡೆಯಲಿದೆ.
- ಗೌರವಾನ್ವಿತ ಅತಿಥಿಗಳಿಂದ **"RTI online Portal"** ಉದ್ಘಾಟನೆ ಮತ್ತು ಮಾಹಿತಿ ಹಕ್ಕು ಅಧಿನಿಯಮದ ವಿಶ್ಲೇಷಣೆ ಕುರಿತ **"ಬೆಳಕಿನೆಡೆಗೆ"** ಪುಸ್ತಕ ಬಿಡುಗಡೆ.

- ಸದರಿ ಕಾರ್ಯಾಗಾರವನ್ನು 02 ಅಧಿವೇಶನಗಳಲ್ಲಿ ಆಯೋಜಿಸಲಾಗಿದ್ದು,

- ಮೊದಲ ಅಧಿವೇಶನ 12:15 ರಿಂದ 01:30 ಗಂಟೆಯವರೆಗೆ ನಡೆಯಲಿದ್ದು, ಶ್ರೀಯುತ ಹೆಚ್.ಪಿ. ಸುಧಾಮ ದಾಸ್, ಮಾನ್ಯ ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ರವರು ಕಾರ್ಯಾಗಾರದ ಕುರಿತು ಪ್ರಸ್ತುತಪಡಿಸುವಂತೆ ತೀರ್ಮಾನಿಸಲಾಯಿತು.

- ಎರಡನೇ ಅಧಿವೇಶನ 02:30 ರಿಂದ 03:30 ಗಂಟೆಯವರೆಗೆ ನಡೆಯಲಿದ್ದು, ಶ್ರೀಯುತ ಎಸ್.ಎಲ್. ಪಾಟೀಲ್, ಮಾನ್ಯ ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ರವರು ಕಾರ್ಯಾಗಾರದ ಕುರಿತು ಪ್ರಸ್ತುತಪಡಿಸುವಂತೆ ತೀರ್ಮಾನಿಸಲಾಯಿತು.

- ಸದರಿ ಆರ್.ಟಿ.ಐ ಕಾರ್ಯಾಗಾರದ ಕುರಿತು ಆಹ್ವಾನಿತರು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳೊಂದಿಗೆ ಮುಕ್ತ ಸಂವಾದವನ್ನು ಏರ್ಪಡಿಸಿದ್ದು, ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರೊಂದಿಗೆ ಮಾನ್ಯ ಮಾಹಿತಿ ಆಯುಕ್ತರುಗಳು ಮುಕ್ತ ಸಂವಾದಕ್ಕೆ ಸಹಕಾರವನ್ನು ನೀಡುವಂತೆ ತೀರ್ಮಾನಿಸಲಾಯಿತು.

- ಡಾ॥ ಎಂ. ಶ್ರೀಧರ ಆಚಾರ್ಯಲು, ಮಾನ್ಯ ಕೇಂದ್ರ ಮಾಹಿತಿ ಆಯುಕ್ತರು (ನಿ) ರವರು ವಿಶೇಷ ಆಹ್ವಾನಿತರಾಗಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ಶಿಷ್ಟಾಚಾರ ವ್ಯವಸ್ಥೆಯನ್ನು ಕೈಗೊಳ್ಳಲು ನಿರ್ಧರಿಸಲಾಯಿತು.

- ಕಾರ್ಯಾಗಾರದಲ್ಲಿ ಭಾಗವಹಿಸುವ ಗೌರವಾನ್ವಿತ ಗಣ್ಯವ್ಯಕ್ತಿಗಳನ್ನು ಸ್ವಾಗತಿಸಲು ಹೂಗುಚ್ಛಗಳನ್ನು ಹಾಗೂ ಬೀಳ್ಕೊಡಲು ಏಲಕ್ಕಿ ಹಾರ ಮತ್ತು ಸ್ಮರಣಿಕೆಗಳನ್ನು ನೀಡಲು ತೀರ್ಮಾನಿಸಲಾಯಿತು.

ಮಾನ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀಯುತ ಎಲ್. ಕೃಷ್ಣಮೂರ್ತಿ ರವರ ಮೇಲ್ಮಿಚಾರಣೆ ಹಾಗೂ ಮಾರ್ಗದರ್ಶನದೊಂದಿಗೆ ಎಲ್ಲಾ ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳು, ಕಾರ್ಯದರ್ಶಿಗಳು ಹಾಗೂ ಅಧಿಕಾರಿ/ಸಿಬ್ಬಂದಿಗಳು ಸದರಿ ಕಾರ್ಯಾಗಾರದ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡುವಂತೆ ತೀರ್ಮಾನಿಸಲಾಯಿತು.

ಕಾರ್ಯಾಗಾರಕ್ಕೆ ಸಂಬಂಧಿತ ಇತರೆ ಯಾವುದೇ ಅಗತ್ಯತೆ ಬಗ್ಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ತೀರ್ಮಾನಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

ಕ್ರಮ: ಕಾರ್ಯದರ್ಶಿ

**2. ಬೆಳಗಾವಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಮಾಹಿತಿ ಆಯೋಗದ ಪೀಠ ರಚನೆ ಕುರಿತು.**

ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಿ/75/ಯೋಪರ/2018, ದಿನಾಂಕ: 10-01-2019 ರನ್ವಯ ಬೆಳಗಾವಿಯ ಸುವರ್ಣ ಸೌಧ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಕಲ್ಪಿಸಿ ಹಾಗೂ ಕಲಬುರ್ಗಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಪೀಠ ರಚನೆ ಮಾಡಲು ಕ್ರಮಕೈಗೊಳ್ಳಲು ಮಾನ್ಯ ಸರ್ಕಾರವು ಸೂಚಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಪೀಠ ರಚನೆಯ ಬಗ್ಗೆ ಕೆಲವು ಅಂಶಗಳನ್ನು ಚರ್ಚಿಸಲಾಯಿತು.

- ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳನ್ನು ಒಳಗೊಂಡಂತೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ನಿರ್ದೇಶನದಂತೆ ನಿರ್ದಿಷ್ಟ ಅವಧಿಗೆ ಪರ್ಯಾಯವಾಗಿ ಬೆಳಗಾಂ ಮತ್ತು ಕಲಬುರ್ಗಿ ಜಿಲ್ಲೆಗಳ ಮಾಹಿತಿ ಆಯೋಗದ ಪೀಠದಲ್ಲಿ ಕರ್ತವ್ಯ ನಿರ್ವಹಿಸುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲಾಯಿತು.
- ಆಯೋಗದಲ್ಲಿ ಪ್ರಸ್ತುತ ಖಾಲಿ ಇರುವ ಮಾನ್ಯ ಮಾಹಿತಿ ಆಯುಕ್ತರುಗಳ (02) ಹುದ್ದೆಗಳನ್ನು ಸರ್ಕಾರ ನಿಗದಿತ ಅವಧಿಯಲ್ಲಿ ತುಂಬಿದಲ್ಲಿ ಬದಲೀ ಕ್ರಮ/ವ್ಯವಸ್ಥೆಯನ್ನು ಕೈಗೊಳ್ಳಬಹುದಾಗಿದೆ.
- ಬೆಳಗಾವಿ ವಿಭಾಗ ಹಾಗೂ ಕಲಬುರ್ಗಿ ವಿಭಾಗದ ಪೀಠಗಳು ತಲಾ 07 ಮತ್ತು 06 ಜಿಲ್ಲೆಗಳನ್ನು ಒಳಗೊಂಡಿದ್ದು, ರಾಜ್ಯ ಮಾಹಿತಿ ಆಯುಕ್ತರುಗಳು ಪ್ರಕರಣಗಳ ವಿಚಾರಣೆ ನಡೆಸಲು ನ್ಯಾಯಾಲಯ ಸಭಾಂಗಣ, ವೈಯಕ್ತಿಕ ಕೊಠಡಿ, ರಾಜ್ಯ ಮಾಹಿತಿ ಆಯುಕ್ತರ ಆಪ್ತ ಸಹಾಯಕರು, ತೀರ್ಪುಬರಹಗಾರರು ಹಾಗೂ ಕಛೇರಿ ಅಧಿಕಾರಿ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಣೆಗಾಗಿ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಡುವಂತೆ ತಿಳಿಸಲಾಯಿತು.
- ಸದರಿ ಪೀಠ ರಚನೆಗೆ ಸಂಬಂಧಿಸಿದಂತೆ ಆಯೋಗದ ಪತ್ರ ಸಂಖ್ಯೆ: ಕಮಾಆ/62/ಆಡಳಿತ(1)/2018, ದಿನಾಂಕ: 16–11–2018ರಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ(ಜನಸ್ಪಂದನ)ರವರಿಗೆ ಪತ್ರ ಬರೆದು ಆಯೋಗದ ಪೀಠ ರಚನೆಗೆ ತಗಲಬಹುದಾದ ಅಂದಾಜು ವೆಚ್ಚದ ವಿವರಗಳನ್ನು ಕಳುಹಿಸಲಾಗಿದೆ ಎಂದು ಮಾನ್ಯ ಕಾರ್ಯದರ್ಶಿಯವರು ಸಭೆಯಲ್ಲಿ ತಿಳಿಸಿದರು.
- ದಿನಾಂಕ: 17–01–2019, 21–01–2019ಗಳಂದು ಪತ್ರಗಳನ್ನು ಬರೆದು, ಸರ್ಕಾರಕ್ಕೆ ಆಯೋಗದ ಪೀಠ ರಚನೆಗೆ ಸಂಬಂಧಿಸಿದಂತೆ ಬೆಳಗಾವಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿನ ಕಛೇರಿಗಳಿಗೆ ಅವಶ್ಯಕವಿರುವ ಹುದ್ದೆಗಳನ್ನು ಸೃಜಿಸುವ ಬಗ್ಗೆ ಪತ್ರವನ್ನು ಬರೆದು ಕೋರಲಾಗಿದೆ.
- ಸದರಿ ಪೀಠಗಳಲ್ಲಿ ಕರ್ತವ್ಯ ನಿರ್ವಹಿಸಲು ಅಗತ್ಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಆಯೋಗದಲ್ಲಿಯೇ ಸೂಕ್ತ ತರಬೇತಿ ಮತ್ತು ಅಗತ್ಯ ತಿಳುವಳಿಕೆಯೊಂದಿಗೆ ನಿಯೋಜಿಸುವಂತೆ ಎಲ್ಲಾ ಮಾನ್ಯ ಮಾಹಿತಿ ಆಯುಕ್ತರುಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಒಟ್ಟಾರೆ ಬೆಳಗಾವಿ ಮತ್ತು ಕಲಬುರರ್ಗಿ ಜಿಲ್ಲೆಯ ಪೀಠ ರಚನೆಗೆ ಸಂಬಂಧಿಸಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳು ಸ್ಥಳಾವಕಾಶ, ವಾಹನ ವ್ಯವಸ್ಥೆ, ಕಛೇರಿ ಸಿಬ್ಬಂದಿ, ಪೀಠೋಪಕರಣಗಳು, ಗಣಕಯಂತ್ರಗಳು ಇತ್ಯಾದಿಗಳನ್ನು ಒಳಗೊಂಡಂತೆ ಸಮಗ್ರ ವ್ಯವಸ್ಥೆಯನ್ನು ಕಲ್ಪಿಸಿದ ನಂತರ ಆಯೋಗದ ಪ್ರಕರಣಗಳ ವಿಚಾರಣೆಗೆ ಸಂಬಂಧಿಸಿದಂತೆ ಅಧಿಕೃತ ಚಾಲನೆಯನ್ನು ನೀಡಬಹುದಾಗಿದೆ ಎಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಮಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

29/1/2019

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು